# ನಗರಸಭಾ ಕಾರ್ಯಾಲಯ, ದೊಡ್ಡಬಳ್ಳಾಪುರ

ಕ್ರ.ಸಂ.ನಸದೊ/ಸಾ.ಸ./03/2009-10 ದಿನಾಂಕ:26-02-2010

## -:: ಸಾಮಾನ್ಯ ಸಭೆ ನಡವಳಿಕೆಗಳು::-

ದಿನಾಂಕ:26-02-2010ರಂದು ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ನಗರಸಭಾ ಅಧ್ಯಕ್ಷರಾದ **ಶ್ರೀ ಎನ್.ಮಲ್ಲಿಕಾರ್ಜುನರವರ** ಅಧ್ಯಕ್ಷತೆಯಲ್ಲಿ ಮಾನ್ಯ ಉಪಾಧ್ಯಕ್ಷರು, ಮಾನ್ಯ ಸದಸ್ಯರುಗಳು ಹಾಗೂ ಮಾನ್ಯ ನಾಮನಿರ್ದೇಶಿತ ಸದಸ್ಯರುಗಳವರ ಸಮ್ಮುಖದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಕೆಗಳು:-

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

| ಸದಸ್ಯರುಗಳು | ಹಾಜರಿ | ಗೈರು ಹಾಜರಿ | ಒಟ್ಟು |
|---|---|---|---|
| | 23 | 08 | 31 |
| ನಾಮ ನಿರ್ದೇಶಿತ ಸದಸ್ಯರುಗಳು | 03 | 02 | 05 |

ಮೊದಲಿಗೆ ನಗರಸಭೆಯ ಆಯುಕ್ತರಾದ **ಶ್ರೀ ಎಸ್.ಪ್ರಭುದೇವ್, ಕೆ.ಎಂ.ಎ.ಎಸ್. ರವರು** ಮಾತನಾಡಿ ನಗರಸಭೆಯ ಮಾನ್ಯ ಅಧ್ಯಕ್ಷರಾದ **ಶ್ರೀ ಎನ್.ಮಲ್ಲಿಕಾರ್ಜುನರವರಿಗೆ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಿ.ಎಸ್. ಸೋಮರುದ್ರಶರ್ಮರವರಿಗೆ, ಮಾನ್ಯ ಸದಸ್ಯರವರಿಗೂ ಮತ್ತು ನಾಮ ನಿರ್ದೇಶಿತ ಸದಸ್ಯರವರಿಗೂ ಸಭೆಯಲ್ಲಿ ಸ್ವಾಗತವನ್ನು ಕೋರಿ,** ನಂತರ ಮಾನ್ಯ ಅಧ್ಯಕ್ಷರಲ್ಲಿ ಸಭೆಯನ್ನು ಪ್ರಾರಂಭಿಸಲು ಅನುಮತಿಯನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ವಿಷಯ ಸಂಖ್ಯೆ:1**

ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸುವ ವಿಚಾರ.

**ತೀರ್ಮಾನ ಸಂಖ್ಯೆ:1**

ಸದರಿ ವಿಷಯವನ್ನು ಸಭೆಯಲ್ಲಿ ಓದಿ ಚರ್ಚಿಸಲಾಗಿ, ಕೋರ್ಟ್ ರಸ್ತೆಗೆ ಹಿಂದಿನ ಸಭೆಯ ತೀರ್ಮಾನದಲ್ಲಿ ರುಮಾಲೆ ಚನ್ನಬಸಪ್ಪನವರ ಹೆಸರಿಡಲು ತೀರ್ಮಾನಿಸಿದ್ದು, ವಿಷಯವನ್ನು ಕೈಬಿಟ್ಟಿರುವುದರಿಂದ ಈ ವಿಷಯವನ್ನು ನಡವಳಿಕೆ ಪುಸ್ತಕದಲ್ಲಿ ದಾಖಲಿಸಲು ತೀರ್ಮಾನಿಸಲಾಯಿತು. ಹಾಗೂ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಮುಗುವಾಳಪ್ಪನವರ ಪ್ರತಿಮೆಯನ್ನು ತಾಲ್ಲೂಕು ಕಛೇರಿ ವೃತ್ತದಲ್ಲಿ ಅನಾವರಣ ಗೊಳಿಸಲು ಈ ಹಿಂದಿನ ಸಭೆಯ ದಿನಾಂಕ:02-02-2010ರಂದು ಚರ್ಚಿಸಿ ತೀರ್ಮಾನಿಸಿರುವಂತೆ ಸ್ಥಳಾವಕಾಶ ಕಲ್ಪಿಸಿಕೊಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಹಾಗೂ ಬೀದಿ ಸ್ವಚ್ಛತಾ ಗುತ್ತಿಗೆದಾರರ ನೌಕರರ ಕಾಲಾವಧಿ ಮುಕ್ತಾಯವಾಗುತ್ತಿರುವುದರಿಂದ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗುವವರೆಗೂ, ಒಂದು ತಿಂಗಳ ಕಾಲಾವಧಿಗೆ ಮಾತ್ರ ಮುಂದುವರೆಸಲು ತೀರ್ಮಾನಿಸಲಾಯಿತು. ಮತ್ತು ಬೇಸಿಗೆ ಕಾಲ ಸಮೀಸುತ್ತಿರುವುದರಿಂದ ನೀರಿನ ಅಭಾವವನ್ನು ಸಾರ್ವಜನಿಕರಿಗೆ ನೀಗಿಸುವ ಸಲುವಾಗಿ, ನಗರಸಭೆಯ ಎರಡು ಟ್ಯಾಂಕರ್‌ಗಳನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತೀರ್ಮಾನಿಸಲಾಯಿತು. ಉಳಿದಂತೆ ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಲಾಯಿತು.

**ವಿಷಯ ಸಂಖ್ಯೆ:2**

ಡಿಸೆಂಬರ್-2009 ಮತ್ತು ಜನವರಿ-2010ರ ಮಾಹೆಗಳ ಜನನ-ಮರಣಗಳ ವಿವರಗಳನ್ನು ಓದಿದಾಖಲಿಸುವ ವಿಚಾರ.

| ಕ್ರ. ಸಂ. | ಮಾಹೆವಾರು | ಜನನ | | | ಮರಣ | | |
|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಡಿಸೆಂಬರ್-2009 | 90 | 130 | 220 | 33 | 20 | 53 |
| 2 | ಜನವರಿ-2010 | 73 | 143 | 217 | 29 | 18 | 47 |
| | **ಒಟ್ಟು** | **163** | **273** | **437** | **62** | **38** | **100** |

-2-

**ತೀರ್ಮಾನ ಸಂಖ್ಯೆ :2**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಮೇಲ್ಕಂಡಂತೆ ಡಿಸೆಂಬರ್-2009 ರಿಂದ ಜನವರಿ-2010ರ ವರೆಗಿನ ಜನನ-ಮರಣಗಳ ವಿವರಗಳನ್ನು ಓದಿ ದಾಖಲಿಸಲಾಯಿತು.

**ವಿಷಯ ಸಂಖ್ಯೆ** :3

ಹಿಂದಿನ ಸಭೆಯಲ್ಲಿ ಅಕ್ಟೋಬರ್-2009 ಮತ್ತು ನವೆಂಬರ್-2009ರ ಮಾಹೆಯ ಜಮಾ-ಖರ್ಚನ್ನು ಮುಂದುವರೆಸಿದ್ದು, ಇದನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ:3**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಅಕ್ಟೋಬರ್-2009 ಮತ್ತು ನವೆಂಬರ್-2009ರ ಮಾಹೆಯ ಜಮಾ-ಖರ್ಚನ್ನು ಮುಂದುವರೆಸಿದ ಜಮಾ ಖರ್ಚುಗಳನ್ನು ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು.

**ವಿಷಯ ಸಂಖ್ಯೆ :4**

ಡಿಸೆಂಬರ್-2009 ಮತ್ತು ಜನವರಿ-2010ರ ಮಾಹೆಗಳ ಜಮಾ ಖರ್ಚುಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

**ತೀರ್ಮಾನ ಸಂಖ್ಯೆ :4**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಡಿಸೆಂಬರ್-2009 ಮತ್ತು ಜನವರಿ-2010ರ ಮಾಹೆಗಳ ಜಮಾ ಖರ್ಚುಗಳನ್ನು ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು. ನೀರಿನ ಕಂದಾಯ ಹಾಗೂ ಅಂಗಡಿ ಬಾಡಿಗೆ ವಸೂಲಿ ಕಡಿಮೆಯಾಗಿದ್ದು, ಮುಂದಿನ ತಿಂಗಳುಗಳಲ್ಲಿ ಪ್ರಗತಿ ಹೆಚ್ಚಿಸಲು ತಿಳಿಸಿ ಒಪ್ಪಿಗೆ ನೀಡಲಾಯಿತು.

**ವಿಷಯ ಸಂಖ್ಯೆ :೫**

2009–10ನೇ ಸಾಲಿನ ಎಸ್.ಎಫ್.ಸಿ.ಅನುಧಾನದ ಟೆಂಡರ್ ಪ್ರಕಟಣೆ ಸಂಖ್ಯೆ.ನಸದೊ/ತಾ.ವಿ/ಟಿ.ಎನ್/07/2009–10 ದಿನಾಂಕ:20–01–2010ಮತ್ತು2008–09ನೇ ಸಾಲಿನ ಮುಕ್ತನಿಧಿ ಹಾಗೂ 2009–10ನೇ ಸಾಲಿನ ಕಟ್ಟಡ ನಿರ್ವಹಣೆಯ 12ನೇ ಹಣಕಾಸು ಯೋಜನೆಯ ಅನುಧಾನದ ಟೆಂಡರ್ ಪ್ರಕಟಣೆ ಸಂಖ್ಯೆ.ನಸದೊ/ತಾ.ವಿ/ಟಿ.ಎನ್./08/2009–2010 ದಿನಾಂಕ:20–01–2010 ರಂದು ಕರೆದಿರುವ ಟೆಂಡರ್‌ಗಳಿಗೆ ಬಂದಿರುವ ಕನಿಷ್ಠ ದರಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ ಸಂಖ್ಯೆ:5**

ಸದರಿ ವಿಷಯವನ್ನು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಗಿ, 2009–10ನೇ ಸಾಲಿನ ಎಸ್.ಎಫ್.ಸಿ. ಅನುಧಾನದ ಟೆಂಡರ್‌ಪ್ರಕಟಣೆ ಸಂಖ್ಯೆ.ನಸದೊ/ತಾ.ವಿ/ಟಿ.ಎನ್/07/2009–10 ದಿನಾಂಕ: 20–01–2010 ರಲ್ಲಿ ಟೆಂಡರ್ ಕರೆದಿದ್ದು, ಈ ಟೆಂಡೆರ್‌ಗಳನ್ನು ದಿನಾಂಕ:10–02–2010 ರಂದು ನಗರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು, ಪೌರಾಯುಕ್ತರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೆಕ್ಕಾಧಿಕಾರಿಗಳು, ಹಾಗೂ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ಟೆಂಡರ್‌ಗಳನ್ನು ತೆರಯಲಾಗಿದ್ದು, ಈ ಕೆಳಕಂಡಂತೆ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರ ದರಗಳನ್ನು ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷ ಗಳಲ್ಲಿ) | ಕಾಮಗಾರಿಗೆ ಟೆಂಡರ್ ಸಲ್ಲಿಸಿರುವ ಒಟ್ಟು ಗುತ್ತಿಗೆದಾರರ ವಿವರಗಳ | ತಾಂತ್ರಿಕ ಅರ್ಹತೆ ಹೊಂದಿರುವ ಗುತ್ತಿಗೆದಾರರು | ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರು | ಷರಾ |
|---|---|---|---|---|---|---|
| 1 | ಪ್ಯಾಕೇಜ್ ನಂ.1: ಅಭಿವೃದ್ಧಿ ಕಾಮಗಾರಿಗಳು. | 29.71 | ಕೆ.ಎಂ.ಅಶ್ವತ್ಥನಾರಾಯಣ | **ಕೆ.ಎಂ.ಅಶ್ವತ್ಥನಾರಾಯಣ** | **ಎಸ್.ಆರ್.ದರ** | ಶ್ರೀ ಕೆ.ಎಂ. ಅಶ್ವತ್ಥ ನಾರಾಯಣ ರವರು ಎಸ್.ಆರ್.ದರದಂತೆ ಕೆಲಸ ನಿರ್ವಹಿಸಲು ನಮೂದಿಸಿದ್ದು, ಇದು ಕಡಿಮೆ ದರವಾಗಿದ್ದು,ಇವರ ಟೆಂಡರ್ ದರಗಳನ್ನು ಅನುಮೋದಿಸಲಾಯಿತು. |
| | | | ಜಿ.ಹೆಚ್.ನಾಗರಾಜ್ | ಜಿ.ಹೆಚ್.ನಾಗರಾಜ್ | ಎಸ್.ಆರ್.ದರಕ್ಕಿಂತ ಶೇ.5.01ಹೆಚ್ಚಿಗೆ | |
| | | | ಮುರುಳೀಧರ್ | ಮುರುಳೀಧರ್ | ಎಸ್.ಆರ್.ದರಕ್ಕಿಂತ ಶೇ.1.74ಹೆಚ್ಚಿಗೆ | |
| | | | ಎಸ್.ಸತ್ತಾರ್‌ಖಾನ್ | ಎಸ್.ಸತ್ತಾರ್‌ಖಾನ್ | ಎಸ್.ಆರ್.ದರಕ್ಕಿಂತ ಶೇ.1.52ಹೆಚ್ಚಿಗೆ | |

| | | | | | | |
|---|---|---|---|---|---|---|
| ೨ | ಪ್ಯಾಕೇಜ್ ನಂ.02: 1)ವಾರ್ಡ್ ನಂ.15ರ ತೂಬಗೆರೆಪೇಟೆಯಲ್ಲಿ ಸೋಡಿಯಂ ಬೀದಿದೀಪ ಅಳವಡಿಸುವ ಕಾಮಗಾರಿ.2)ವಾರ್ಡ್ ನಂ.17ರ ಕುಚ್ಚಪ್ಪನಪೇಟೆಯಲ್ಲಿ ಸೋಡಿಯಂ ಬೀದಿದೀಪ ಅಳವಡಿಸುವ ಕಾಮಗಾರಿ.3) ವಾರ್ಡ್ ನಂ.18ರ ಕುಚ್ಚಪ್ಪನಪೇಟೆ ಪ್ರದೇಶದಲ್ಲಿ ಸೋಡಿಯಂ ಬೀದಿದೀಪಗಳನ್ನು ಅಳವಡಿಸುವ ಕಾಮಗಾರಿ.4) ವಾರ್ಡ್ ನಂ.24ರ ಗಾಣಿಗರಪೇಟೆಯಲ್ಲಿ ಸೋಡಿಯಂ ಬೀದಿದೀಪ ಅಳವಡಿಸುವ ಕಾಮಗಾರಿ.5) ದೊಡ್ಡಬಳ್ಳಾಪುರ ನಗರಸಬಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡಗಳಪ್ರದೇಶಗಳಲ್ಲಿ ಮೆಟೆಲ್‌ಹಲೈಡ್ ವಿದ್ಯುತ್ ಬೀದಿದೀಪಗಳನ್ನು ಅಳವಡಿಸುವ ಕೆಲಸ. | 11.81 | ಲಕ್ಷ್ಮೀ ವರದರಾಜ್ ಎಲೆಕ್ಟ್ರಿಕಲ್ಸ್ | ಲಕ್ಷ್ಮೀ ವರದರಾಜ್ ಎಲೆಕ್ಟ್ರಿಕಲ್ಸ್ | ಎಸ್.ಆರ್.ದರಕ್ಕಿಂತ ಶೇ.7.83ಹೆಚ್ಚಿಗೆ | ಲಕ್ಷ್ಮೀ ವರದರಾಜ್ ಎಲೆಕ್ಟ್ರಿಕಲ್ಸ್ ರವರು ಎಸ್.ಆರ್.ದರಕ್ಕಿಂತ ಶೇ.7.83 ಹೆಚ್ಚಿಗೆ ನಿರ್ವಹಿಸಲು ದರವನ್ನು ನಮೂದಿಸಿದ್ದು, ಇದನ್ನು ಎಸ್.ಆರ್. ದರಕ್ಕೆ ನಿಗಧಿಪಡಿಸಿ ಅನುಮೋದಿಸ ಲಾಯಿತು. |
| | | | ಸಾಯಿ ಎಲೆಕ್ಟ್ರಿಕ್ ಕಂ | ತಾಂತ್ರಿಕ ಅರ್ಹತೆ ಹೊಂದಿರುವುದಿಲ್ಲ | ಎಸ್.ಆರ್.ದರಕ್ಕಿಂತ ಶೇ.12.47ಹೆಚ್ಚಿಗೆ | |
| | | | ನ್ಯಾಶ್‌ನಲ್ ಪ್ಲೈವುಡ್ ಅಂಡ್ ಎಲೆಕ್ಟ್ರಿಕಲ್ಸ್ | ತಾಂತ್ರಿಕ ಅರ್ಹತೆ ಹೊಂದಿರುವುದಿಲ್ಲ | ಎಸ್.ಆರ್.ದರಕ್ಕಿಂತ ಶೇ.23.50ಹೆಚ್ಚಿಗೆ | |
| | | | ಕಾರ್ತಿಕ್ ಎಲೆಕ್ಟ್ರಿಕಲ್ಸ್,ಬೆಂ | ಕಾರ್ತಿಕ್ ಎಲೆಕ್ಟ್ರಿಕಲ್ಸ್,ಬೆಂ | ಎಸ್.ಆರ್.ದರಕ್ಕಿಂತ ಶೇ.10.81ಹೆಚ್ಚಿಗೆ | |
| ೩ | ಪ್ಯಾಕೇಜ್ ನಂ.04: 1) ವಾರ್ಡ್ ನಂ.26ರ ಮಾರುತಿನಗರದಲ್ಲಿ ಸಮುದಾಯಭವನ ನಿರ್ಮಾಣ ಕಾಮಗಾರಿ. 2)ದೊಡ್ಡಬಳ್ಳಾಪುರ ನಗರಸಬಾ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಪ್ರದೇಶಗಳಲ್ಲಿ ಚರಂಡಿ ಮಾಡುವ ಕಾಮಗಾರಿ 3)ವಾರ್ಡ್ ನಂ.4 ರೋಜಿಪುರ ಕಾಲೊನಿಯಲ್ಲಿ ರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸ್ಮಶಾನ ಅಭಿವೃದ್ಧಿ ಕಾಮಗಾರಿ | 9.55 | ಎ.ಆರ್.ಲಕ್ಷ್ಮೀನಾರಾಯಣ | ಎ.ಆರ್.ಲಕ್ಷ್ಮೀನಾರಾಯಣ | ಎಸ್.ಆರ್.ದರ ಕ್ಕಿಂತ ಶೇ.7.77 ಹೆಚ್ಚಿಗೆ | ಎ.ಆರ್.ಲಕ್ಷ್ಮೀನಾರಾಯಣರವರು ಎಸ್.ಆರ್.ದರಕ್ಕಿಂತ ಶೇ.7.77 ಹೆಚ್ಚಿಗೆ ನಿರ್ವಹಿಸಲು ದರವನ್ನು ನಮೂದಿಸಿದ್ದು, ಇದನ್ನು ಎಸ್.ಆರ್. ದರಕ್ಕೆ ನಿಗಧಿಪಡಿಸಿಅನುಮೋದಿಸಲಾಯಿತು. |
| | | | ಮರಿಯಪ್ಪ | ತಾಂತ್ರಿಕ ಅರ್ಹತೆ ಹೊಂದಿರುವುದಿಲ್ಲ | | --- |

| | | | | | | |
|---|---|---|---|---|---|---|
| 4 | ಪ್ಯಾಕೇಜ್ ನಂ.05: 1)ಆಲಹಳ್ಳಿ ಪಂಪ್ ಹೌಸ್‌ಗೆ 30ಹೆಚ್.ಪಿ. ಸೆಂಟ್ರಿಫ್ಯೂಗಲ್ ಮೋಟಾರ್ ಪಂಪ್, ಪ್ಯಾನಲ್ ಬೋರ್ಡ್ ಗಳನ್ನು ಅಳವಡಿಸುವುದು | 5.00 | ಬನಶಂಕರಿ ಸೇಲ್ಸ್ ಕಾರ್ಪೋರೇಶನ್ | ಬನಶಂಕರಿ ಸೇಲ್ಸ್ ಕಾರ್ಪೋರೇಶನ್ | ಎಸ್.ಆರ್.ದರ | ಬನಶಂಕರಿ ಸೇಲ್ಸ್ ಕಾರ್ಪೋರೇಶನ್ ರವರು ಎಸ್.ಆರ್. ದರದಂತೆ ಕೆಲಸ ನಿರ್ವಹಿಸಲು ನಮೂದಿಸಿದ್ದು, ಇದು ಕಡಿಮೆ ದರವಾಗಿದ್ದು, ಇವರ ಟೆಂಡರ್ ದರಗಳನ್ನು ಅನುಮೋದಿಸಲಾಯಿತು. |

| | | | | | | |
|---|---|---|---|---|---|---|
| **12ನೇ ಹಣಕಾಸು ಮುಕ್ತನಿಧಿ** | | | | | | |
| 1 | ದೊಡ್ಡಬಳ್ಳಾಪುರ ನಗರದ ಭಗತ್‌ಸಿಂಗ್ ಸ್ಟೇಡಿಯಂ ಪಕ್ಕದಲ್ಲಿ ಚರಂಡಿ ನಿರ್ಮಿಸುವುದು ಹಾಗೂ ವಾರ್ಡ್ ನಂ.1ರ ಗಂಗಾಧರಪುರ ಅಡ್ಡರಸ್ತೆಗಳಲ್ಲಿ ಚರಂಡಿ ನಿರ್ಮಿಸುವ ಕೆಲಸ. | 10.00 | 1)ಟಿ.ಎಂ. ಮಂಜುನಾಥ್ | ಟಿ.ಎಂ.ಮಂಜುನಾಥ್ | ಶೇ.5.07 ಅಂದಾಜು ದರಕ್ಕಿಂತ ಹೆಚ್ಚಿಗೆ | ಟಿ.ಎಂ. ಮಂಜುನಾಥ್ ರವರು ಎಸ್.ಆರ್.ದರಕ್ಕಿಂತ ಶೇ.5.07 ಹೆಚ್ಚಿಗೆ ನಿರ್ವಹಿಸಲುದರವನ್ನುನಮೂದಿಸಿದ್ದು, ಇದನ್ನು ಎಸ್.ಆರ್. ದರಕ್ಕೆ ನಿಗಧಿಪಡಿಸಿಅನುಮೋದಿಸಲಾಯಿತು. |
| | | | 2)ಕೆ.ಬಿ.ಬಚ್ಚೇಗೌಡ | ತಾಂತ್ರಿಕ ಅರ್ಹತೆ ಹೊಂದಿರುವುದಿಲ್ಲ | | |
| **12ನೇ ಹಣಕಾಸು ಸಾರ್ವಜನಿಕ ಕಟ್ಟಡ ನಿರ್ವಹಣೆ ನಿದಿ** | | | | | | |
| 2 | ನಗರಸಭಾ ಕಾರ್ಯಾಲಯದ ವಾರ್ಷಿಕ ನಿರ್ವಹಣೆ ಕಾಮಗಾ | 2.25 | 1)ಸರ್ದಾರ್‌ಪಾಷ | ಸರ್ದಾರ್ ಪಾಷ | ಶೇ.7.50 ಅಂದಾಜು ದರಕ್ಕಿಂತ ಹೆಚ್ಚಿಗೆ | ಸರ್ದಾರ್ ಪಾಷ ರವರು ಎಸ್.ಆರ್. ದರಕ್ಕಿಂತ ಶೇ.7.50 ಹೆಚ್ಚಿಗೆ ನಿರ್ವಹಿಸಲು ದರವನ್ನು ನಮೂದಿಸಿದ್ದು, ಇದನ್ನು ಎಸ್.ಆರ್. ದರಕ್ಕೆ ನಿಗಧಿ ಪಡಿಸಿಅನುಮೋದಿಸಲಾಯಿತು. |

| 2009-10ನೇ ಸಾಲಿನ ಎಸ್.ಎಫ್.ಸಿ. ಅನುದಾನ ನಿಧಿ | | | | | | |
|---|---|---|---|---|---|---|
| 1 | 90 ಹೆಚ್.ಪಿ. ಟಿಪ್ಪರ್ ಟ್ರಕ್ ಖರೀದಿಸಿರುವ ವಿಚಾರ | -- | ಅಶೋಕ್ ಲೇ ಲ್ಯಾಂಡ್, # 87, 2ನೇ ಮಹಡಿ, ಬುಲ್ ಟೆಂಪಲ್ ರಸ್ತೆ,ಬೆಂಗಳೂರು -04 | ಅಶೋಕ್ ಲೇ ಲ್ಯಾಂಡ್, # 87, 2ನೇ ಮಹಡಿ, ಬುಲ್ ಟೆಂಪಲ್ ರಸ್ತೆ, ಬೆಂಗಳೂರು -04 | ರೂ.9,48,000/- | ಅಶೋಕ್ ಲೇ ಲ್ಯಾಂಡ್‌ರವರು, # 87, 2ನೇ ಮಹಡಿ, ಬೆಂಗಳೂರು ರವರು ನಮೂದಿಸಿರುವ ದರವು ಕಡಿಮೆ ದರವಾಗಿದ್ದು, ಈ ಟೆಂಡರ್ ದರಗಳನ್ನು ಅನುಮೋದಿಸಲಾಯಿತು. |
| | | -- | ಸುಂಧರಂ ಮೋಟಾರ್ಸ್, # 107, ಕಸ್ತೂರು ಬಾ ರಸ್ತೆ, ಬೆಂಗಳೂರು-01 | ಸುಂಧರಂ ಮೋಟಾರ್ಸ್, # 107, ಕಸ್ತೂರು ಬಾ ರಸ್ತೆ, ಬೆಂಗಳೂರು-01 | ರೂ.9,60,000/- | ---- |
| 2 | 10ಲೀ ಬಕೆಟ್ಸ್‌ಗಳನ್ನು ಖರೀದಿಸುವ ವಿಚಾರ | -- | ಸಿಂಟೆಕ್ಸ್ ಇಂಡಸ್ಟ್ರೀಸ್ ಮಹಾಲಕ್ಷ್ಮಿ ಪುರಂ, ಬೆಂಗಳೂರು | ಸಿಂಟೆಕ್ಸ್ ಇಂಡಸ್ಟ್ರೀಸ್ ಮಹಾಲಕ್ಷ್ಮಿ ಪುರಂ, ಬೆಂಗಳೂರು | ರೂ. 115/- | ---- |
| | | -- | ರಾಘವೇಂದ್ರ ಸ್ಟೋರ್ಸ್ ಹೇಮಾವತಿಪೇಟೆ, ದೊಡ್ಡಬಳ್ಳಾಪುರ | ರಾಘವೇಂದ್ರ ಸ್ಟೋರ್ಸ್ ಹೇಮಾವತಿಪೇಟೆ, ದೊಡ್ಡಬಳ್ಳಾಪುರ | ರೂ.92/- | ರಾಘವೇಂದ್ರ ಸ್ಟೋರ್ಸ್, ಹೇಮಾವತಿ ಪೇಟೆ, ದೊಡ್ಡಬಳ್ಳಾಪುರ ರವರು ನಮೂದಿಸಿರುವ ದರವು ಕಡಿಮೆ ದರವಾಗಿದ್ದು, ಈ ಟೆಂಡರ್ ದರಗಳನ್ನು ಅನುಮೋದಿಸಲಾಯಿತು. |

**<u>ವಿಷಯ ಸಂಖ್ಯೆ :6</u>**

ಭಗತ್‌ಸಿಂಗ್ ಕ್ರೀಡಾಂಗಣದಲ್ಲಿ ಮಾಡಿಸಿರುವ ಅಭಿವೃದ್ಧಿ ಕಾಮಗಾರಿಗಳ ಪೈಕಿ 8.00 ಲಕ್ಷಗಳನ್ನು ಎಸ್.ಎಫ್.ಸಿ. ವಿಶೇಷ ಅನುಧಾನದಲ್ಲಿ ಪಾವತಿಸಿದ್ದು, ಹೆಚ್ಚುವರಿಯಾಗಿ ನಿರ್ವಹಿಸಿರುವ ಕಾಮಗಾರಿ ಬಿಲ್ಲು 9.50 ಲಕ್ಷಗಳನ್ನು ನಗರಸಭಾ ನಿಧಿಯಿಂದ ಪಾವತಿಸುವ ವಿಚಾರ,

**<u>ತೀರ್ಮಾನ ಸಂಖ್ಯೆ :6</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಭಗತ್‌ಸಿಂಗ್ ಕ್ರೀಡಾಂಗಣಕ್ಕೆ ಎಸ್.ಎಫ್.ಸಿ. ವಿಶೇಷ ಅನುಧಾನದಡಿಯಲ್ಲಿ ನಿರ್ವಹಿಸಿರುವ ಅಭಿವೃದ್ಧಿ ಕಾಮಗಾರಿಯು ಅಂದಾಜು ಮೊತ್ತಕ್ಕಿಂತ ರೂ.9.50 ಲಕ್ಷಗಳು ಹೆಚ್ಚುವರಿಯಾಗಿರುವ ಮೊತ್ತವನ್ನು ನಗರಸಭಾ ನಿಧಿಯಿಂದ ಪಾವತಿಸಲು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ :7</u>**

ದೊಡ್ಡಬಳ್ಳಾಪುರ ನಗರದ ಹಳೇ ಬಸ್ ನಿಲ್ದಾಣದಲ್ಲಿರುವ ಹದಿನಾರು ಕಣ್ಣಿನ ಬಾವಿಗೆ ಕಾಂಪೌಂಡ್ ಹಾಕಲು ಪರವಾನಿಗೆಯನ್ನು ಕೋರಿ ಬಂದಿರುವ ಅರ್ಜಿ ವಿಚಾರ.

**<u>ತೀರ್ಮಾನ ಸಂಖ್ಯೆ:7</u>**

ಈ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಈಗಾಗಲೇ ಈ ವಿಚಾರದಲ್ಲಿ ನ್ಯಾಯಾಲಯದಲ್ಲಿ ದಾವೆಗಳು ನಡೆದು, ಅಂತಿಮವಾಗಿ ನೀಡಿರುವ ತೀರ್ಪನ್ನು ಕೂಲಂಕುಶವಾಗಿ ಪರಿಶೀಲಿಸಿ, ಈ ತೀರ್ಪಿನ ಅಂಶಗಳನ್ನು ನ್ಯಾಯವಾದಿಗಳಿಂದ ಕಾನೂನು ಸಲಹೆ/ಅಭಿಪ್ರಾಯ ಪಡೆಯಬೇಕೆಂದು, ಆನಂತರ ಮುಂದಿನ ಕ್ರಮದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ :8</u>**

ಹಳೇ ಬಸ್ ನಿಲ್ದಾಣದ ಹತ್ತಿರವಿರುವ ಶ್ರೀ ರಾಘವೇಂದ್ರ ಹೋಟೆಲ್ ಮಾಲೀಕರಾದ ಶ್ರೀ ಕೆ.ವಿ.ವೆಂಕಟೇಶ್‌ಭಟ್‌ರವರಿಗೆ ಈ ಹಿಂದಿನ ಸಭೆಯ ದಿನಾಂಕ:28-11-2006ರ ತೀರ್ಮಾನದಂತೆ ಸ್ಕೌಟ್ ಕ್ಯಾಂಪ್ ರಸ್ತೆಯ ಶ್ರೀ ಪ್ರಕಾಶ್ ಲೇಔಟ್‌ನಲ್ಲಿ ಬದಲಿ ನಿವೇಶನ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:8</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಈ ಹಿಂದಿನ ಸಾಮಾನ್ಯ ಸಭೆ ದಿನಾಂಕ: 28-11-2006ರಲ್ಲಿ ಚರ್ಚಿಸಿ ತೀರ್ಮಾನಿಸಿರುವಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

**<u>ವಿಷಯ ಸಂಖ್ಯೆ :9</u>**

ಶ್ರೀ ಮುಗುವಾಳಪ್ಪ ಸ್ವಾತಂತ್ರ್ಯ ಹೋರಾಟಗಾರರು, ದೊಡ್ಡಬಳ್ಳಾಪುರ ರವರಿಗೆ ಈ ಹಿಂದಿನ ಸಭೆಯ ದಿನಾಂಕ:28-11-2006ರ ತೀರ್ಮಾನದಂತೆ ಬದಲಿ ನಿವೇಶನ ನೀಡುವ ವಿಚಾರ.

**<u>ತೀರ್ಮಾನ ಸಂಖ್ಯೆ:9</u>**

ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ ಈ ಹಿಂದಿನ ಸಾಮಾನ್ಯ ಸಭೆಯ ದಿನಾಂಕ: 28-11-2006ರ ತೀರ್ಮಾನದಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

---

**ಸಹಿ:-**
**(ಎನ್. ಮಲ್ಲಿಕಾರ್ಜುನ)**
**ಅಧ್ಯಕ್ಷರು,**
**ನಗರಸಭೆ, ದೊಡ್ಡಬಳ್ಳಾಪುರ.**

**"ನಕಲು ಪ್ರತಿ "**

**ಪೌರಾಯುಕ್ತರು,**
**ನಗರಸಭೆ, ದೊಡ್ಡಬಳ್ಳಾಪುರ.**